



ಉತ್ತಮ ಕಲಾಕೃತಿಯೊಂದು ಮೇಲ್ನೋಟಕ್ಕೆ ಕಾಣಿಸುವ ವಿವರಗಳೊಂದಿಗೆ ಒಳನೋಟವನ್ನೂ ಕಾಣಿಸುತ್ತದೆ. ವ್ಯಕ್ತಿತ್ವ, ಅಂತಃಕರಣ, ಸ್ವಭಾವವನ್ನೂ ಚಿತ್ರದಲ್ಲಿ ಮೂಡಿಸಿ ಸಹೃದಯನನ್ನು ಬೆರಗುಗೊಳಿಸುವುದು ಎಲ್ಲರಿಗೂ ಸಾಧ್ಯವಾಗುವಂತಹದ್ದಲ್ಲ. ಹೀಗೆ, ಬಹಿರಂಗದೊಂದಿಗೆ ಅಂತರಂಗವನ್ನೂ ಚಿತ್ರಿಸುವ ವಿಶಿಷ್ಟ ಕಲಾವಿದರ ಸಾಲಿಗೆ ಸೇರಿದವರು ಶಿವಮೊಗ್ಗದ ಕೆ. ಜ್ಞಾನೇಶ್ವರ.

ಜ್ಞಾನೇಶ್ವರ ಅವರ ಕಲಾಪ್ರತಿಭೆ ರಕ್ತಗತವಾದುದೂ ಹೌದು, ಸ್ವಯಂ ಸಾಧನೆಯಿಂದ ಪ್ರಖರಗೊಳಿಸಿಕೊಂಡ ಸಿದ್ಧಿಯೂ ಹೌದು. ಪರಂಪರೆ, ಹೊಸ ಶೈಲಿಗಳ ಸಮ್ಮಿಲನದ ಕಲಾಶಕ್ತಿ ಅವರದು.

ಮೈಸೂರು ಅರಮನೆಯ ಆಸ್ಥಾನ ಕಲಾವಿದರಾಗಿದ್ದ ತಿಪ್ಪಾಜಪ್ಪ ಚಿತ್ರಗಾರ ಅವರು ರೇಖಾಚಿತ್ರಗಳ ರಚನೆಗೆ ಪ್ರಖ್ಯಾತರಾದವರು. ಅವರನ್ನು ಚಿನ್ನದ ಪದಕ ಹಾಗೂ ಪಾರಿತೋಷಕಗಳೊಂದಿಗೆ ಮಹಾರಾಜರು ಗೌರವಿಸಿದ್ದರು. ಅದೇ ಕುಟುಂಬದ ನಾಲ್ಕನೇ ತಲೆಮಾರಿನವರು ಜ್ಞಾನೇಶ್ವರ. ಅವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಕೆ. ಕೃಷ್ಣಾಜಿರಾವ್ ಹಾಗೂ ಪರ್ವತಮ್ಮ ದಂಪತಿಯ ಆರು ಮಕ್ಕಳಲ್ಲಿ ಒಬ್ಬರು.

ಜ್ಞಾನೇಶ್ವರ ಅವರ ಅಣ್ಣ ಶಿಲ್ಪಿ ಕೆ. ಕಾಶಿನಾಥ ಅವರೂ ಶ್ರೇಷ್ಠ ಕಲಾವಿದ. ಜಕಣಾಚಾರ್ಯ ಪ್ರಶಸ್ತಿ ಪುರಸ್ಕೃತ, ಕಿರಿಯ ಸಹೋದರರಾದ ಶಿಲ್ಪಿ ನಾರಾಯಣರಾವ್ ಹಾಗೂ ಚಂದ್ರಕಾಂತ್ ಅವರೂ ಬಹಳಷ್ಟು ಕಲಾಕೃತಿಗಳ ಮೂಲಕ ಜನಮನ್ನಣೆಗೆ ಭಾಜನರಾಗಿದ್ದಾರೆ. ಸಹೋದರಿಯರರಾದ ಮುಕ್ತಬಾಯಿ, ರೇಣುಕಾಬಾಯಿ ಅವರೂ ಚಿತ್ರಕಲೆಯಲ್ಲಿ ಸಾಕಷ್ಟು ಸಾಧನೆ ಮಾಡಿದವರೇ. ಹೀಗೆ ಇಡೀ ಕುಟುಂಬವೇ ಕಲೆಯ ಆರಾಧನೆಯಲ್ಲಿ ತೊಡಗಿಸಿಕೊಂಡಿದೆ.



ಜ್ಞಾನೇಶ್ವರ